



ಅರುಣ ಪಿ. ಭಟ್ಟ

# ವಾರಭವಿಷ್ಯ: 14.09.2023ರಿಂದ 20.09.2023ರವರೆಗೆ




ವಾರದ ಶುರುವಿನಲ್ಲಿ ಕೆಲವು ದೈಹಿಕ ಸಮಸ್ಯೆಗಳು ಎದುರಾಗಲಿವೆ. ಅನಾರೋಗ್ಯ ಸಮಸ್ಯೆ ಕೂಡ ಕಾಡಬಹುದು. ಕೌಟುಂಬಿಕ ವಿಷಯಗಳ ಬಗ್ಗೆ ಅಳೆದು ತೂಗಿ ವ್ಯವಹರಿಸಿ. ಇತ್ತೀಚಿನ ಬೆಳವಣಿಗೆಗಳಿಂದ ನಿಮ್ಮ ಸಂಗಾತಿಗೆ ಉದ್ಭವಿಸಿರುವ ಕೆಲ ಪ್ರಶ್ನೆಗಳಿಗೆ ಉತ್ತರ ನೀಡಬೇಕಾಗುತ್ತದೆ. ಅದೇ ರೀತಿ ನಿಮ್ಮಲ್ಲಿ ಇರುವ ಹಲವು ಪ್ರಶ್ನೆಗಳಿಗೆ ಉತ್ತರ ಪಡೆಯಲು ಪ್ರಯತ್ನಿಸುತ್ತೀರಿ. ಶುಭದಿನ 14. ವಿಷ್ಣು ಸಹಸ್ರನಾಮ ಪಠಿಸಿರಿ.

---

ವಾರದ ಆರಂಭದಲ್ಲಿ ಎಂಜಿನಿಯರಿಂಗ್ ವೃತ್ತಿಯಲ್ಲಿ ಇರುವವರಿಗೆ ಉತ್ತಮ ಸಮಯ. ಅನುಭವಿ ಹಿರಿಯರಿಂದ ಅವಶ್ಯವಾದ ಜ್ಞಾನ ಸಂಪಾದನೆ ಮಾಡುತ್ತೀರಿ. ವಿದ್ಯಾರ್ಥಿಗಳಿಗೆ ತಮ್ಮ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಲು ಅನುಕೂಲ. ಕುಟುಂಬಸ್ಥರಿಗೆ ನಿಮ್ಮ ಮೇಲಿನ ಪ್ರೀತಿ ಹಾಗೂ ಕಾಳಜಿ ಹೆಚ್ಚಾಗಲಿದೆ. ವಾರದ ಮಧ್ಯ ಭಾಗದಲ್ಲಿ ಖರ್ಚು ಹೆಚ್ಚಾಗಲಿದೆ. ಶುಭದಿನ 19. ಹನುಮಾನ್ ಚಾಲೀಸ್ ಓದಿರಿ.




---




ವ್ಯಾಪಾರದಲ್ಲಿ ಉತ್ತಮ ಬೆಳವಣಿಗೆ. ಸಮಸ್ಯೆಗಳ ನಿವಾರಣೆಗೆ ದಾರಿ ದೊರೆಯುತ್ತದೆ. ಆರೋಗ್ಯವು ಉತ್ತಮವಾಗಿರುತ್ತದೆ. ದೈನಂದಿನ ಕೆಲಸ ಕಾರ್ಯಗಳಲ್ಲಿ ಬದಲಾವಣೆ ಬೇಕಿಲ್ಲ. ವಾರದ ಮಧ್ಯ ಭಾಗದಲ್ಲಿ ಆದಾಯದಲ್ಲಿ ಹೆಚ್ಚಳವಾಗುತ್ತದೆ. ಬಂಡವಾಳದ ಲಾಭ ಪಡೆಯಲು ಇದು ಸರಿಯಾದ ಸಮಯ. ವಾರದ ಅಂತ್ಯಕ್ಕೆ ಕೆಲಸ ಪೂರೈಸುವುದು ಕಷ್ಟವಾಗುತ್ತದೆ. ಶುಭದಿನ 20. ಆಂಜನೇಯ ಉಪಾಸನೆ ಮಾಡಿರಿ.

---

ವಾರದ ಆರಂಭದಲ್ಲಿ ಸ್ಥಾನಮಾನ ಹೆಚ್ಚಿಸಿಕೊಳ್ಳುವುದಕ್ಕೆ ಶ್ರಮವನ್ನು ಹಾಕುತ್ತೀರಿ. ಸಿಕ್ಕ ಅವಕಾಶವನ್ನು ಸಂಪೂರ್ಣವಾಗಿ ಬಳಸಿಕೊಳ್ಳುವಿರಿ. ಅನಾರೋಗ್ಯ ನಿಮ್ಮನ್ನು ಕಾಡಬಹುದು. ವಾರದ ಮಧ್ಯ ಭಾಗದಲ್ಲಿ ಕೌಟುಂಬಿಕ ವಿಚಾರಗಳಲ್ಲಿ ಅಭಿವೃದ್ಧಿ. ವಾರದ ಅಂತ್ಯಕ್ಕೆ ಸರಿಯುತ್ತಾ ಗ್ರಹಗತಿಗಳು ನಿಮ್ಮ ಪರವಾಗಿ ಇರುವುದರಿಂದ ಆರೋಗ್ಯದಲ್ಲಿ ಚೇತರಿಕೆ ಕಾಣಿಸಿಕೊಳ್ಳುತ್ತದೆ. ಶುಭದಿನ 18. ಸೌಂದರ್ಯ ಲಹರಿ ಪಠಿಸಿರಿ.




---




ಉದ್ಯೋಗಸ್ಥರು ಬಹಳ ವೇಗವಾಗಿ ತಮ್ಮ ಪಾಲಿನ ಕೆಲಸವನ್ನು ಮಾಡಿ ಮುಗಿಸುತ್ತೀರಿ. ಮನೆಯಲ್ಲಿ ಹಣಕಾಸು ಪರಿಸ್ಥಿತಿ ಚೆನ್ನಾಗಿರುತ್ತದೆ. ಪದೇ ಪದೇ ಆರೋಪದಿಂದ ಬೇಸರಕ್ಕೆ ಒಳಗಾಗುತ್ತೀರಿ. ಬೇರೆ ಯಾರನ್ನೂ ನಂಬಬಾರದು ಎಂದು ತಕ್ಷಣಕ್ಕೆ ತೀರ್ಮಾನಕ್ಕೆ ಬರುವ ಸಾಧ್ಯತೆ ಇದೆ. ಕುಟುಂಬ ಸದಸ್ಯರು ಒಟ್ಟಾಗಿ, ಸಂತೋಷದಿಂದ ಇರುತ್ತಾರೆ. ಶುಭದಿನ 16. ಸಂಕಷ್ಟಹರ ಗಣಪತಿಗೆ ದೂರ್ವಾರ್ಚನೆ ಮಾಡಿರಿ.

---

ವಾರದ ಶುರುವಿನಲ್ಲಿ ಕೌಟುಂಬಿಕ ಜೀವನ ತುಂಬ ಚೆನ್ನಾಗಿರುತ್ತದೆ. ಕುಟುಂಬ ಸದಸ್ಯರ ಮೇಲೆ ನಿಮಗಿರುವ ವಿಶ್ವಾಸ ಮತ್ತಷ್ಟು ಹೆಚ್ಚಾಗುತ್ತದೆ. ಸಂಗಾತಿ ಮತ್ತು ಮಕ್ಕಳ ಜೊತೆ ಹೆಚ್ಚಿನ ಸಮಯ ಕಳೆಯುತ್ತೀರಿ. ಆರೋಗ್ಯವು ಉತ್ತಮವಾಗಿರುತ್ತದೆ. ಪಿತ್ರಾರ್ಜಿತ ಆಸ್ತಿ ಮೇಲೆ ಯಾರೋ ಹಕ್ಕು ಚಲಾಯಿಸುವ ಸಾಧ್ಯತೆ ಇದೆ. ವೈಯಕ್ತಿಕ ಸಂಬಂಧದಲ್ಲಿ ಬಹಳ ಕಿರಿಕಿರಿ ಉಂಟಾಗುತ್ತದೆ. ಶುಭದಿನ 17. ಕಾಲಭೈರವನ ಸೇವೆ ಮಾಡಿರಿ.




---




ದಿನದಿನಕ್ಕೂ ಹೆಚ್ಚಾಗುತ್ತಿರುವ ಖರ್ಚನ್ನು ಕಡಿಮೆ ಮಾಡಿಕೊಳ್ಳಲು ಯೋಜನೆ ರೂಪಿಸುತ್ತೀರಿ. ವಾರದ ಮಧ್ಯ ಭಾಗದಲ್ಲಿ ವೈವಾಹಿಕ ಜೀವನದಲ್ಲಿ ಪ್ರಗತಿ ಇದೆ. ವ್ಯಾಪಾರದ ಅಭಿವೃದ್ಧಿಗೆ ಯತ್ನಿಸುತ್ತಿರುವವರಿಗೆ ಅತ್ಯುತ್ತಮ ಅವಕಾಶಗಳು ದೊರೆಯಲಿವೆ. ಉದ್ಯೋಗಸ್ಥರಿಗೆ ಹಲವು ರೀತಿಯಲ್ಲಿ ಸವಾಲುಗಳು ಎದುರಾಗುತ್ತವೆ. ಸಂಗಾತಿ ಜೊತೆಗೆ ಅಸಮಾಧಾನ ತಲೆದೋರಬಹುದು. ಶುಭದಿನ 20. ಲಿಂಗಾಷ್ಟಕ ಪಠಿಸಿರಿ.

---

ಎಂಜಿನಿಯರಿಂಗ್ ಕ್ಷೇತ್ರದವರಿಗೆ ಹೆಚ್ಚಿನ ಅವಕಾಶಗಳು ಹುಡುಕಿಕೊಂಡು ಬರುತ್ತವೆ. ಕುಟುಂಬದೊಳಗೆ ಸಂತಸದ ವಾತಾವರಣ ಇರುತ್ತದೆ. ಈ ವರೆಗಿನ ನಿಮ್ಮ ಆದಾಯ ಮೂಲಗಳಿಂದ ಬರುವ ಗಳಿಕೆ ಮತ್ತಷ್ಟು ಹೆಚ್ಚಾಗಲಿದೆ. ನಿಮ್ಮ ಹಣದ ಮೂಲವನ್ನು ಸರಿಯಾದ ದಾರಿಯಲ್ಲಿ ವಿತರಿಸಲು ಯಶಸ್ಸು ಸಾಧಿಸುತ್ತೀರಿ. ದೊಡ್ಡ ಮಟ್ಟದ ಲಾಭ ಪಡೆಯುವ ಅವಕಾಶ ಇದೆ. ಶುಭದಿನ 19. ಶಿವಕವಚ ಪಠಣ ಮಾಡಿರಿ.




---




ವಾರದ ಶುರುವಿನಿಂದಲೇ ವೈಯಕ್ತಿಕ ಹಾಗೂ ವೃತ್ತಿಪರ ಜೀವನದಲ್ಲಿ ಉತ್ತಮ ಹೆಸರು ಪಡೆಯಲಿದ್ದೀರಿ. ತಂದೆ ಜೊತೆಗೆ ಬಾಂಧವ್ಯ ಮತ್ತಷ್ಟು ಗಟ್ಟಿಯಾಗುತ್ತದೆ. ಮನೆಯಲ್ಲಿ ಸಂತೋಷವಾದ ವಾತಾವರಣ ಇರುತ್ತದೆ. ಈ ಅವಧಿಯಲ್ಲಿ ಉದ್ಯೋಗಸ್ಥರು ಪರಿಣಾಮಕಾರಿಯಾಗಿ ಕೆಲಸಗಳನ್ನು ಪೂರ್ಣಗೊಳಿಸುತ್ತೀರಿ. ವಾರದ ಅಂತ್ಯಕ್ಕೆ ಆದಾಯದಲ್ಲಿ ಹೆಚ್ಚಳ ಆಗಲಿದೆ. ಶುಭದಿನ 18. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.

---

ವ್ಯವಹಾರ ವಿಸ್ತರಣೆಯತ್ತ ಹೆಚ್ಚು ಗಮನ ನೀಡುತ್ತೀರಿ. ಈ ಅವಧಿಯಲ್ಲಿ ರಕ್ತದೊತ್ತಡದ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ದೊಡ್ಡ ಮಟ್ಟದ ಉದ್ಯಮ ನಡೆಸುತ್ತಿರುವವರಿಗೆ ಉತ್ತಮ ಸಮಯ. ವಾರದ ಅಂತ್ಯಕ್ಕೆ ಸರಿಯುತ್ತಾ ಆದಾಯದಲ್ಲಿ ಹೆಚ್ಚಳವಾಗಲಿದೆ. ಪ್ರೀತಿ ಪ್ರೇಮದಲ್ಲಿ ಇರುವವರು ಸಂಗಾತಿಯ ನಿರೀಕ್ಷೆಯನ್ನು ತಲುಪುವಲ್ಲಿ ಯಶಸ್ವಿಯಾಗುತ್ತೀರಿ. ಶುಭದಿನ 16. ವಿಷ್ಣು ಸಹಸ್ರನಾಮ ಓದಿರಿ.




---




ನಿಮ್ಮ ಶ್ರಮಕ್ಕೆ ಪ್ರತಿಫಲ ವೇಗವಾಗಿ ದೊರೆಯುತ್ತದೆ. ಉದ್ಯಮಕ್ಕೆ ಸಂಬಂಧಿಸಿದಂತೆ ಕೆಲವು ಯೋಜನೆಗಳನ್ನು ಶೀಘ್ರವಾಗಿ ರೂಪಿಸಲಿದ್ದೀರಿ. ಆರೋಗ್ಯ ನೀವು ಅಂದುಕೊಳ್ಳುವ ಮಟ್ಟಿಗೆ ಸಹಕಾರ ನೀಡುವುದಿಲ್ಲ. ಉನ್ನತ ಶಿಕ್ಷಣದಲ್ಲಿ ಉತ್ತಮ ಸಾಧನೆ ಮಾಡುವ ಅವಕಾಶಗಳಿವೆ. ವಾರದ ಅಂತ್ಯಕ್ಕೆ ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಚೇತರಿಕೆ ಇದೆ. ಶುಭದಿನ 17. ಚಂಡಿ ಪಾರಾಯಣ ಮಾಡಿರಿ.

---

ವಾರದ ಶುರುವಿನಲ್ಲಿ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಬಹಳ ಮುಖ್ಯ. ವ್ಯಾಪಾರ ಉದ್ಯಮಕ್ಕೆ ಸಂಬಂಧಿಸಿದ ಒಡಂಬಡಿಕೆಯೊಂದನ್ನು ಅಂತಿಮಗೊಳಿಸಲಿದ್ದೀರಿ. ಇಷ್ಟು ಸಮಯ ಕಾಪಾಡಿಕೊಂಡು ಬಂದಿದ್ದ ವರ್ಚಸ್ಸು ಸಂಗಾತಿಯಿಂದಾಗಿ ಹಾಳಾಗುವ ಸಾಧ್ಯತೆ ಇದೆ. ವಾರದ ಅಂತ್ಯಕ್ಕೆ ಸರಿಯುತ್ತಾ ಸೋದರರ ಜೊತೆಗೆ ಬಾಂಧವ್ಯ ಉತ್ತಮಗೊಳ್ಳುತ್ತದೆ. ಶುಭದಿನ 15. ಶ್ರೀವೆಂಕಟೇಶ್ವರ ಸ್ತೋತ್ರ ಪಠಿಸಿರಿ.

